"ಅತಿ ಜರೂರು"

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/ಶೈವಿ/289/ಸ್ನಾಕೋಮಾ/2013-14

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:03.06.2017.

ಇವರಿಗೆ,

ಜಂಟಿ ನಿರ್ದೇಶಕರು,
ಪ್ರಾದೇಶಿಕ ಕಛೇರಿ,
ಕಾಲೇಜು ಶಿಕ್ಷಣ ಇಲಾಖೆ,
**ಬೆಂಗಳೂರು / ಮೈಸೂರು / ಶಿವಮೊಗ್ಗ /**
**ಧಾರವಾಡ / ಮಂಗಳೂರು / ಕಲಬುರಗಿ.**

ಮಾನ್ಯರೆ,

**ವಿಷಯ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಎರಡೂ ಪದವಿ ತರಗತಿಗಳಿಗೆ ಬೋಧಿಸುವ ಅಧ್ಯಾಪಕರುಗಳ ಸೇವೆಯನ್ನು "Non- Vacation" ಎಂದು ಪರಿಗಣಿಸಿ, ಬೇಸಿಗೆ & ಮಧ್ಯಂತರ ರಜಾ ದಿನಗಳಲ್ಲಿ ಕಾರ್ಯ ನಿರ್ವಹಿಸಿದ ಅವಧಿಗೆ ಅನುಪಾತ ಗಳಿಕೆ ರಜೆ ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಪತ್ರ ಸಂಖ್ಯೆ: ಇಡಿ/75/ಯುಇಸಿ/2017, ದಿ.:24.05.2017.
2. ಈ ಕಛೇರಿಯ ಸಮಸಂಖ್ಯೆ ಪತ್ರ ದಿನಾಂಕ:12.04.2017.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ, ಸ್ನಾತಕ ಹಾಗೂ ಸ್ನಾತಕೋತ್ತರ ಎರಡೂ ಪದವಿ ತರಗತಿಗಳಿಗೆ ಬೋಧಿಸುವ ಅಧ್ಯಾಪಕರುಗಳಿಗೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ಹೊರಡಿಸಿರುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗೆ ಸಂಬಂಧಿಸಿದ ವೇಳಾಪಟ್ಟಿಗಳನ್ನು (ಕ್ಯಾಲೆಂಡರ್ ಆಫ್ ಇವೆಂಟ್ಸ್) ಅನುಸರಿಸಿ ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ. ಸ್ನಾತಕ ಪದವಿ ತರಗತಿಗಳಿಗೆ ಮಧ್ಯಂತರ ರಜೆ ಇರುವಾಗ ಸ್ನಾತಕೋತ್ತರ ಪದವಿ ತರಗತಿಗಳು ಪ್ರಾರಂಭಗೊಂಡು ನಡೆಯುತ್ತಿರುತ್ತವೆ. ಹಾಗಾಗಿ ಸ್ನಾತಕ - ಸ್ನಾತಕೋತ್ತರ ಪದವಿಗಳೆರಡರ ತರಗತಿಗಳಿಗೆ ಬೋಧಿಸುವ ಅಧ್ಯಾಪಕರುಗಳು ಸ್ನಾತಕೋತ್ತರ ತರಗತಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಆದ್ದರಿಂದ, ಸ್ನಾತಕ ಮತ್ತು ಸ್ನಾತಕೋತ್ತರ ಎರಡೂ ತರಗತಿಗಳಿಗೆ ಬೋಧಿಸುವ ಅಧ್ಯಾಪಕರುಗಳಿಗೆ ಸದ್ಯಕ್ಕೆ ಸ್ನಾತಕ ಪದವಿಗೆ ಸಂಬಂಧಿಸಿದ ವೇಳಾಪಟ್ಟಿಯನ್ನು ಅನುಸರಿಸಿ ಆ ವೇಳಾಪಟ್ಟಿಯಲ್ಲಿನ ಬೇಸಿಗೆ ಅಥವಾ ಮಧ್ಯಂತರ ರಜೆ ಇರುವಾಗ ಸ್ನಾತಕೋತ್ತರ ಪದವಿಗಳ ತರಗತಿಗಳನ್ನು ತೆಗೆದುಕೊಂಡಿದ್ದಲ್ಲಿ ಆ ಬೋಧನಾ ದಿನಗಳ ಅವಧಿಗೆ ಅನುಪಾತ ಗಳಿಕೆ ರಜೆಯನ್ನು ಅವರುಗಳಿಗೆ ಮಂಜೂರು ಮಾಡುವ ಬಗ್ಗೆ ಸರ್ಕಾರದ ಅನುಮತಿ / ಆದೇಶ ಕೋರಿ ಉಲ್ಲೇಖ(2)ರ ಈ ಕಛೇರಿಯ ಸಮಸಂಖ್ಯೆ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಈ ಸಂಬಂಧ ಪರಿಶೀಲಿಸಲು, ಎರಡೂ ತರಗತಿಗಳಿಗೆ ಬೋಧಿಸುವ ಅಧ್ಯಾಪಕರುಗಳ ಸಂಖ್ಯೆ ಎಷ್ಟು, ಅವರಿಗೆ ಎಷ್ಟು ದಿನಗಳ ಅನುಪಾತ ರಜೆಯನ್ನು ಮಂಜೂರು ಮಾಡಬೇಕಾಗುತ್ತದೆ ಹಾಗೂ ಅನುಪಾತ ಗಳಿಕೆ ರಜೆ ಮಂಜೂರು ಮಾಡುವುದರಿಂದ ಉಂಟಾಗುವ ರಜೆಯ ವೇತನದ ಹೊರೆ ಎಷ್ಟು ಎಂಬುದರ ಬಗ್ಗೆ ಕೂಡಲೇ ಸರ್ಕಾರಕ್ಕೆ ಮಾಹಿತಿಯನ್ನು ಒದಗಿಸುವಂತೆ ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ನಿರ್ದೇಶಿಸಲಾಗಿರುತ್ತದೆ.

ಆದ್ದರಿಂದ, ಸರ್ಕಾರ ಕೋರಿರುವಂತೆ, ಕೂಡಲೇ ತಮ್ಮ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಕೆಳಗೆ ಕೊಟ್ಟಿರುವ ನಿಗದಿತ ನಮೂನೆಯಲ್ಲಿ ಪಡೆದು, ನಿಯಮಾನುಸಾರ ಪರಿಶೀಲಿಸಿ, ಕ್ರೋಢೀಕರಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ಕಾಲೇಜುವಾರು ಮಾಹಿತಿಗಳನ್ನು ಈ ಪತ್ರ ತಲುಪಿದ 3 ದಿನದೊಳಗಾಗಿ ಹಾರ್ಡ್ ಮತ್ತು ಸಾಫ್ಟ್ ಕಾಪಿಗಳನ್ನು ಈ ಕಛೇರಿಗೆ ಸಲ್ಲಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

| ಕ್ರ.ಸಂ. | ಸ್ನಾತಕ/ಸ್ನಾತಕೋತ್ತರ ಎರಡೂ ತರಗತಿಗಳಿಗೆ ಬೋಧಿಸುವ ಅಧ್ಯಾಪಕರ ಹೆಸರು/ ವಿಷಯ | 2016-17ರಲ್ಲಿ ಮಧ್ಯಂತರ & ಬೇಸಿಗೆ ರಜೆಗಳಲ್ಲಿ ಸ್ನಾತಕೋತ್ತರ ತರಗತಿಗಳಿಗೆ ಬೋಧಿಸಿರುವ ಅವಧಿ (ಪರೀಕ್ಷಾ ಕಾರ್ಯ ಹೊರತುಪಡಿಸಿ) | ಆ ಅವಧಿಗೆ ಮಂಜೂರು ಮಾಡಬಹುದಾದ ಅನುಪಾತ ಗಳಿಕೆ ರಜೆ | ಸದರಿ ಗಳಿಕೆ ರಜೆ ನಗದೀಕರಣಗೊಳಿಸಿದಲ್ಲಿ ಮಂಜೂರು ಮಾಡಬೇಕಾ-ಗುವ ವೇತನದ ಮೊತ್ತ |
|---|---|---|---|---|
| | | | | |

ತಮ್ಮ ವಿಶ್ವಾಸಿ,

ಕಾಲೇಜು ಶಿಕ್ಷಣ ನಿರ್ದೇಶಕರು

**ಪ್ರತಿಯನ್ನು :**

1. ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು.
2. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.
3. ಕಛೇರಿ ಪ್ರತಿ.